ಶ್ರೀ ಎಸ್. ಕರಿಯಪ್ಪ.—ಮೀಡಿಯಮ್-ಸೈಸ್ಡ್ ಪ್ರಾಜೆಕ್ಟುಗಳು ಯಾವುದನ್ನೂ ಸರ್ವೆ ಮಾಡಬಾರದೆಂದು ಇದ್ದೀವೆಂದು ಹೇಳಿದ್ದೀರಿ. ಇದು ಏನು? ಆಗಲೇನೇ ಬೇಕಾದಷ್ಟು ತರಿ ಅಚ್ಚುಕಟ್ಟು ಇದೆಯೆನ್ನುವ ಕಾರಣದಿಂದಲೋ, ಅಥವಾ ಮತ್ತಾವ ಕಾರಣದಿಂದಲೋ, ಈ ರೀತಿ ತೀರ್ಮಾನ ಮಾಡಿದ್ದೀರಿ?

†ಶ್ರೀ ವೀರೇಂದ್ರ ಪಾಟೀಲ್.—ನಿಮ್ಮ ತಾಲ್ಲೂಕಿನಲ್ಲಿ ಮೀಡಿಯಮ್ ಸೈಸ್ಡ್ ಪ್ರಾಜೆಕ್ಟುಗಳು ಸರ್ವೆ ಮಾಡುವಂಥವು ಯಾವುವೂ ಇಲ್ಲ. ಆದ್ದರಿಂದ ಸರ್ವೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಅರ್ಕಾವತಿ ಪ್ರಾಜೆಕ್ಟ್ ನವೂದು ಮಾಡಿದ್ದೀರಿ. ಅದನ್ನು ತೆಗೆದುಕೊಳ್ಳುವುದು ಯಾವಾಗ? ಅದು ಸ್ಯಾಂಕ್ಷನ್ ಆಗಿದೆಯೇ? ಅದು ಯಾವ ಸ್ಟೇಜಿನಲ್ಲಿ ಇದೆ?

ಶ್ರೀ ವೀರೇಂದ್ರ ಪಾಟೀಲ್.—ಸರ್ವೆ ಈಗಾಗಲೇ ಕಂಪ್ಲೀಟ್ ಆಗಿದೆ. ಎಸ್ಟಿಮೇಟುಗಳು ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಸ್ಕ್ರೂಟಿನಿಯಾಗುತ್ತಾ ಇವೆ, ಅವು ಬಂದ ಮೇಲೆ ಸ್ಯಾಂಕ್ಷನ್ ಮಾಡುವ ಪ್ರಶ್ನೆ ವಿಚಾರ ಮಾಡುತ್ತೀವೆ.

———

Mileage of Roads formed under Rural Communication Programme in the State.

*Q.—20. Sri G. V. GOWDA (Palyam).—

Will the Government be pleased to state :—

(*a*) the total mileage of roads formed under the Rural Communication Programme upto 28th February 1962 in the State ;

(*b*) the total amount spent for the same ;

(*c*) whether these roads are being maintained after they are formed ?

A.—Sri VEERENDRA PATIL (Minister for Public Works and Transport).—

(*a*) 12,861 miles.

(*b*) Rs.350 lakhs upto end of 1961.

(*c*) It is proposed to hand over these reads to Taluka Boards for maintenance.

ಶ್ರೀ ಜಿ. ವಿ. ಗೌಡ.—ಈ ೧೨,೮೬೧ ಮೈಲಿ ರಸ್ತೆಯಲ್ಲಿ ಸುಮಾರು ಒಂದು ವರ್ಷದಿಂದ ಹಾಕಿದಂಥ ರಸ್ತೆಗಳು ಅಸ್ತಿತ್ವದಲ್ಲಿವೆಯೇ?

†ಶ್ರೀ ವೀರೇಂದ್ರ ಪಾಟೀಲ್.—ರಸ್ತೆಗಳನ್ನು ಟ್ಯಾಕಲ್ ಮಾಡುತ್ತಾ ಇದ್ದೀವೆ. ಈಗಾಗಲೇ ೧೨,೮೬೧ ಮೈಲಿ ರಸ್ತೆಯನ್ನು ಟ್ಯಾಕಲ್ ಮಾಡಿದ್ದೀವೆ.

ಶ್ರೀ ಜಿ. ವಿ. ಗೌಡ.—ಟ್ಯಾಕಲ್ ಮಾಡಿಯಾದ ಮೇಲೆ ದುರಸ್ತಿಗಾಗಲಿ, ಮೇಂಟೆನೆನ್ಸಿಗಾಗಲಿ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ರೂರಲ್ ಕಮ್ಯೂನಿಕೇಷನ್ ರೋಡ್ ವಿಷಯವನ್ನು ಹೇಳುತ್ತೇನೆ. ಹಾಕಿರುವ ಕಾರ್ಯಕ್ರಮದಂತೆ, ಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಮೇಂಟೆನನ್ಸ್ ಕೆಲಸ ವಹಿಸಿಕೊಳ್ಳಬೇಕೆಂಬ ಒಂದು ಪ್ರಪೋಸಲ್ ಸರ್ಕಾರದ ಮುಂದಿದೆ.

ಶ್ರೀ ಜಿ. ವಿ. ಗೌಡ.—ದುರಸ್ತಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ತಾಲ್ಲೂಕು ಬೋರ್ಡ್‌ಗಳಿಗಾಗಲಿ, ಪಂಚಾಯತಿಗಳಿಗಾಗಲಿ, ಸಾಕಷ್ಟು ಹಣದ ಅನುಕೂಲತೆ ಇಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಅವರ ಹತ್ತಿರ ಕೂಡ ಸಾಕಷ್ಟು ಹಣ ಇದೆಯೇ ಇಲ್ಲವೇ ಎಂಬ ಪ್ರಶ್ನೆ ಅದು. ಆದರೆ ೧೩ ಸಾವಿರ ಮೈಲಿ ರಸ್ತೆ ಮಾಡಿದ ಮೇಲೆ ಅದನ್ನು ಮೇಂಟೇನ್ ಮಾಡುವುದಕ್ಕೆ ಸರ್ಕಾರದ ಹತ್ತಿರ ಅಷ್ಟು ಹಣವಿಲ್ಲ. ಇಂಟರ್‌ಏಲೇಜ್ ಕಮ್ಯೂನಿಕೇಷನ್ ಸಣ್ಣ ರೋಡುಗಳಿರುವುದರಿಂದ, ಅವರೇ ಮಾಡಲಿ ಎನ್ನುವ ಅಲೋಚನೆ ಸರ್ಕಾರಕ್ಕೂ ಇದೆ.

ಶ್ರೀ ಜಿ. ವಿ. ಗೌಡ.—ಈ ದುರಸ್ತಿ ಮಾಡುವ ಕೆಲಸವನ್ನು ಅವರಿಗೆ ವಹಿಸಿದ್ದೇ ಆದರೆ, ಮೂರೂವರೆ ಕೋಟಿ ರೂಪಾಯಿ ಖರ್ಚು ಮಾಡಿದಂಥಾದ್ದು ಹಾಳಾಗುವುದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ರಸ್ತೆಗಳನ್ನು ಮೇಂಟೇನ್ ಮಾಡುವ ಒಂದು ಪ್ರಶ್ನೆ ಉದ್ಭವಿಸುವುದು ರಸ್ತೆಗಳು ಕಂಪ್ಲೀಟ್ ಆದ ಮೇಲೆ. ರಸ್ತೆಗಳನ್ನು ಟ್ಯಾಕಲ್ ಮಾಡಿದ್ದೇವೆ, ಇನ್ನೂ ಕಂಪ್ಲೀಷನ್ ಸ್ಟೇಜಿನಲ್ಲಿವೆ, ಡಿಫರೆಂಟ್ ಸ್ಟೇಜಿನಲ್ಲಿ ಕೆಲಸ ಇದೆ. ಇಷ್ಟು ರಸ್ತೆ ಪೂರ್ಣವಾಗುವ ತನಕ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ವಿ. ಗೌಡ.—ಎಷ್ಟು ಮೈಲಿ ರಸ್ತೆ ಪೂರ್ಣವಾಗಿದೆ?

ಶ್ರೀ ವೀರೇಂದ್ರ ಪಾಟೀಲ್.—ಟ್ಯಾಕಲ್ ಮಾಡಿದ್ದೇವೆ. ಪ್ರತಿಯೊಂದು ರಸ್ತೆಯನ್ನು ತೆಗೆದುಕೊಂಡಿದ್ದೇವೆ. ಸ್ವಲ್ಪ ಭಾಗ ಆಗಿದೆ. ಕಂಪ್ಲೀಟ್ ಆಗದೆಯೇ ಹೇಳುವಹಾಗಿಲ್ಲ.

ಶ್ರೀ ಜಿ. ವಿ. ಗೌಡ.—ಕಡೇ ತೀರ್ಮಾನದಲ್ಲಿ ಎಷ್ಟು ಮೈಲಿ ಪೂರ್ಣವಾಗಿದೆ.

Sri VEERENDRA PATIL.—That is why I have said that the total mileage tackled so far is 12,861. That does not mean that all these 12,861 miles of road has been completed. It has been tackled and the execution of work is at different stages.

(*Many Hon'ble Members rose*)

Mr. SPEAKER.—The Hon'ble Members want to know—out of these, how many miles have been completed.

Sri VEERENDRA PATIL.—I will get that information because that is now not with me now.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ೩೫೦ ಲಕ್ಷ ರೂಪಾಯಿಗಳಲ್ಲಿ, ಹೆಚ್ಚಾಗಿ ಹಣ ಖರ್ಚಾಗಿರತಕ್ಕಂಥ ಜಿಲ್ಲೆ ಯಾವುದು?

Sri VEERENDRA PATIL.—The districtwar figures are not with me.

† Asterisk indicates that the remarks or speeches have not been revised by the member concerned.

Sri ANNA RAO GANAMUKHI.—May I know the additional outlay required to complete 12,861 miles of road ?

Sri VEERENDRA PATIL.—I can't give the exact figures. We require about three crores more to complete the roads which have already been tackled.

ಶ್ರೀ ಡಿ. ಎ. ಸಿದ್ದಯ್ಯ.–(*a*) ನಲ್ಲಿ ೨೮-೨-೧೯೬೨ರ ತನಕ ಎಷ್ಟು ಮೈಲಿ ಹಳ್ಳಿಗಳ ರಸ್ತೆ ಆಗಿದೆ ಎಂದು ಕೇಳಿದೆ. (*b*) ಉತ್ತರದಲ್ಲಿ ೧೯೬೨ರ ಅಂತ್ಯದವರೆಗೆ ಖರ್ಚಾದ ಹಣ ಮಾತ್ರ ಹೇಳಿದ್ದೀರಿ. ೧೯೬೨ರ ತನಕ ಎಷ್ಟು ಖರ್ಚಾಗಿದೆ ?

Sri VEERENDRA PATIL.—Sir, up to the end of March 1961—rather up to the end of December 1961 (Calendar year), we have spent 350 lakhs. Up to the end of March 1962, we have spent 420 lakhs.

ಶ್ರೀ ಬಿ. ಹುಚ್ಚೇಗೌಡ.—ಈ ರೋಡುಗಳ ಎಸ್ಟಿಮೇಟ್ ಮಾಡಿಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ತಾಲ್ಲೂಕಿನಲ್ಲಿ ೫೦ ಮೈಲಿ ರೋಡನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಪ್ರತಿಯೊಂದು ಮೈಲಿಗೆ ಆರು ಸಾವಿರಕ್ಕಿಂತ ಹೆಚ್ಚಿಗೆ ಆಗಬಾರದೆಂದು ಹೇಳಿದ್ದೇವೆ. ಈ ರೀತಿ ಎಸ್ಟಿಮೇಟುಗಳನ್ನು ಮಾಡಿ ಕೆಲಸ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ಕಾಸ್‌ವೇ ರಸ್ತೆಗಳನ್ನೂ ತೆಗೆದುಕೊಂಡಿದ್ದೀರಾ ?

Sri VEERENDRA PATIL.—The proposal under Rural Communication programme includes construction of rural communications roads, construction of missing links, construction of cross drainage works on non-P. W. D. works.

ಶ್ರೀ ಬಿ. ಹುಚ್ಚೇಗೌಡ.—ಈ ರೋಡುಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಇನ್ನು ಎಷ್ಟು ದಿವಸಗಳು ಬೇಕು ?

ಶ್ರೀ ವೀರೇಂದ್ರ ಪಾಟೀಲ್.—ಕಂಪ್ಲೀಟ್ ಮಾಡುವುದಕ್ಕೆ ಎಷ್ಟು ದಿವಸ ಬೇಕು ಎಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಈಗಾಗಲೇ ಸುಮಾರು 50 ರೋಡುಗಳನ್ನು ಟ್ಯಾಕಲ್ ಮಾಡಿ ಕಂಪ್ಲೀಟ್ ಮಾಡಬೇಕೆಂದಿದ್ದೇವೆ. ಟೋಟಲ್ ಮೈಲೇಜ್ 13,400 ಮೈಲಿಗೆ ಬರುತ್ತದೆ. ಇದಕ್ಕೆ 8 ಕೋಟಿ ರೂಪಾಯಿ ಬೇಕು. ಇನ್ನೂ ಸುಮಾರು ನಾಲ್ಕು ಕೋಟಿ ರೂಪಾಯಿವರೆಗೆ ಬೇಕಾಗುತ್ತದೆ. ದುಡ್ಡು ಒದಗಿದಂತೆ ರೋಡುಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri A. P. APPANNA.—In answer to (*b*) it is stated that it is proposed to hand over these roads to taluk bords for maintenance. Has it come to the notice of Government that certain incomplete roads have been handed over to the taluk board for maintenance in Coorg District ?

Sri VEERENDRA PATIL.—I have no information.

ಶ್ರೀ ಬಿ. ಹುಚ್ಚೇಗೌಡ.—ಈಗ ತಾನೆ ಮಾನ್ಯ ಮಂತ್ರಿಗಳು ಈಗ ಪ್ರಾರಂಭಿಸಿರತಕ್ಕ ರಸ್ತೆಗಳ ಕೆಲಸವನ್ನು ಪೂರ್ತಿಗೊಳಿಸಲು ಇನ್ನೂ 4 ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಅಪ್ಪಣೆ ಕೊಡಿಸಿದರು. ನಾಳೆ ಈ ರಸ್ತೆಗಳನ್ನೆಲ್ಲ ತಾಲ್ಲೂಕು ಬೋರ್ಡುಗಳಿಗೆ ವಹಿಸಿದರೆ ಆಗ ಅವರಿಗೆ ಇಷ್ಟು ಮೊಬಲಗನ್ನು ಒದಗಿಸಲು ಸರ್ಕಾರದವರು ಏರ್ಪಾಡು ಮಾಡಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ತಾಲ್ಲೂಕ್ ಬೋರ್ಡಿನವರಲ್ಲಿ ನಲಕರಣೆಗಳಿಲ್ಲ-ಸಿಬ್ಬಂದಿಯಿಲ್ಲ. ಆದುದರಿಂದ ಸರ್ಕಾರದವರೇ ಈಗ ಈ ಕಾರ್ಯವನ್ನು ಕೈಗೊಂಡಿರುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಈ ರಸ್ತೆಗಳ ಕೆಲಸ ಪೂರ್ತಿಯಾಗಿ ಮುಗಿದಮೇಲೆ ಈ ರಸ್ತೆಗಳನ್ನು ತಾಲ್ಲೂಕ್‌ಬೋರ್ಡುಗಳಿಗೆ ವಹಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹೌದು. ಈ ರಸ್ತೆಗಳ ಕೆಲಸ ಮುಗಿದನಂತರ ಇವುಗಳ ದುರಸ್ತಿ ಕಾರ್ಯವನ್ನು ಆ ತಾಲ್ಲೂಕ್‌ಬೋರ್ಡುಗಳಿಗೆ ವಹಿಸೋಣ ಎನ್ನತಕ್ಕ ಒಂದು ಸಲಹೆ ಸರ್ಕಾರದವರ ಗಮನದಲ್ಲಿದೆ. ಆ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ.

ಶ್ರೀ ಎ. ಕೃಷ್ಣಪ್ಪ.—ಈ ರಸ್ತೆಗಳ ಜವಾಬ್ದಾರಿಯನ್ನು ತಾಲ್ಲೂಕ್ ಬೋರ್ಡುಗಳಿಗೆ ವಹಿಸುವ ಮುನ್ನ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೀರಾ ? ಅವುಗಳ ಸಂಪತ್ತಿನ ವಿಚಾರ ಹೇಗಿರುತ್ತದೆಂಬುದನ್ನು ತಿಳಿದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದವರು ಈ ವಿಚಾರದಲ್ಲಿ ಯಾವ ಅಂತಿಮ ನಿರ್ಧಾರವನ್ನೂ ಇನ್ನೂ ಕೈಗೊಂಡಿಲ್ಲ. ಇದು ಸರ್ಕಾರದ ಒಂದು ಪಾಲಿಸಿಗೆ ಸಂಬಂಧಪಟ್ಟ ವಿಚಾರವಾಗಿದೆ. ಈ ಬಗ್ಗೆ ಒಂದು ಪ್ರಪೋಜಲ್ ಸರ್ಕಾರದ ಮುಂದಿದೆ.

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಳ ಬಗ್ಗೆ ನಿಖರವಾದ ಅಂಕಿಅಂಶಗಳನ್ನು ತರಿಸಿದ್ದಿರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಸರ್ಕಾರದವರು ಕೈಗೊಂಡಿರತಕ್ಕ ರಸ್ತೆಗಳ ಕೆಲಸವೆಲ್ಲ ಮೊದಲು ಪೂರೈಸಬೇಕು. ಅನಂತರ ಇವುಗಳನ್ನು ತಾಲ್ಲೂಕ್ ಬೋರ್ಡಿಗೆ ಕೊಡಬೇಕೇ ಬೇಡವೇ ಎಂಬ ಪ್ರಶ್ನೆ ಬರುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ತಾಲ್ಲೂಕ್ ಬೋರ್ಡುಗಳು ಹಣವಿಲ್ಲ ಎಂದು ಹೇಳುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ನಾನಿನ್ನೂ ಯಾವ ನಿರ್ಣಯವನ್ನೂ ತೆಗೆದುಕೊಂಡಿಲ್ಲ.

ಶ್ರೀ ವೈ. ರಾಮಚಂದ್ರ.—ಅರ್ಬನ್ ಏರಿಯಾದಲ್ಲಿ ರತಕ್ಕ ರಸ್ತೆಗಳ ವಿಚಾರದಲ್ಲಿ ಏನು ಮಾಡಿದ್ದಾರೆ ?

Mr. SPEAKER.—It is outside the scope of the question.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರಿಗೆ ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡುಗಳ ಅಭಿಪ್ರಾಯ ಪಡೆಯಲು ಸಾಧ್ಯವಿಲ್ಲವೆಂಬುದಾದರೆ ಈ ಸಭೆಯ ಮಾನ್ಯ ಸದಸ್ಯರುಗಳೆಲ್ಲರೂ ತಾಲ್ಲೂಕ್ ಬೋರ್ಡಿನ ಎಕ್ಸ್-ಅಫಿಷಿಯೋ ಮೆಂಬರುಗಳಾಗಿರುವುದರಿಂದ ಈ ರಸ್ತೆಗಳನ್ನ ತಾಲ್ಲೂಕ್ ಬೋರ್ಡಿನವರಿಗೆ ವಹಿಸಬೇಕೇ ಬೇಡವೇ ಎಂಬುದರ ಬಗ್ಗೆ ಈ ಸಭೆಯ ಅಭಿಪ್ರಾಯವನ್ನಾದರೂ ಪಡೆಯುತ್ತೀರಾ ?

Sri VEERENDRA PATIL.—It is a suggestion for action.

Sri ANNA RAO GANAMUKHI.—In view of the stock reply given by the Minister, if the taluk boards refuse to take over the roads, will they be left uncared for?

Sri VEERENDRA PATIL.—All those factors will be taken into consideration while taking a final decision with regard to this policy matter.

Sri G. V. GOWDA.—The Minister said that the question of maintenance of the roads woulds arise after their completion. Is it not a fact that several roads have been already completed?

Sri VEERENDRA PATIL.—I have already said that the information as to how many miles of roads have been completed is not with me and so I am not in a position to give the required information.

ಶ್ರೀ ಟಿ. ಮಾದಯ್ಯಗೌಡ.—ಪ್ರತಿಯೊಂದು ಬ್ಲಾಕಿನಲ್ಲೂ 50 ಮೈಲಿ ರಸ್ತೆ ಮಾಡಬೇಕೆಂಬ ಯೋಜನೆಯ ಪ್ರಕಾರ ಇಲ್ಲಿಯವರೆಗೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮೈಲಿ ರಸ್ತೆ ಆಗಿದೆ–ಎಷ್ಟು ಪೊಬಲಗು ಖರ್ಚಾಗಿದೆ–ಎಷ್ಟು ಪೊಬಲಗು ಉಳಿದಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈ 50 ಮೈಲಿ ರಸ್ತೆಗಳನ್ನು ಮಾಡಬೇಕೆಂಬ ಪಾಲಿಸಿಯನ್ನು ನಾವೀಗ ಇಟ್ಟುಕೊಂಡಿದ್ದೇವೆ. ಈ ಹಿಂದೆ ಕೆಲವು ಜಿಲ್ಲೆಗಳಲ್ಲಿ ಬೇಕಾದಷ್ಟು ರಸ್ತೆ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಕಡಮೆ ಕೆಲಸ ಆಗಿದೆ. ಪ್ರತಿ ತಾಲ್ಲೂಕಿನಲ್ಲೂ ಈ 50 ಮೈಲಿಯ ರಸ್ತೆ ಕೆಲಸ ಆಗಬೇಕಾಗಿದ್ದರೆ ನಾನಾಗಲೇ ಹೇಳಿದ 12861 ಮೈಲಿ ರಸ್ತೆ ಜೊತೆಗೆ ಇನ್ನೂ 8550 ಮೈಲಿ ರಸ್ತೆಗಳ ಕೆಲಸ ಆಗಬೇಕಾಗುತ್ತದೆ. ಇದಕ್ಕೆಲ್ಲ ಬೇಕಾಗತಕ್ಕ ಸನ್ನಾಹಗಳನ್ನು ಒದಗಿಸಿಕೊಳ್ಳುವುದರಲ್ಲಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದುವರೆಗಾಗಲೆ ಪೂರ್ಣವಾಗಿದ್ದ ಕೆಲವು ರಸ್ತೆಗಳೇನಿದ್ದುವು ಮೊನ್ನೆ ಬಂದ ಮಳೆಯಲ್ಲಿ wash-off ಆಗಿ ಹೋಗಿವೆ. ಆ ರಸ್ತೆಗಳ ಗತಿಯೇನು? ಅವುಗಳನ್ನು ರಿಪೇರಿ ಮಾಡತಕ್ಕವರು ಯಾರು?

ಶ್ರೀ ವೀರೇಂದ್ರ ಪಾಟೀಲ್.—ಈಗ ಆ ವಿವರಗಳೆಲ್ಲ ನನ್ನ ಹತ್ತಿರ ಇಲ್ಲ. ಈಗ ನಾವು ಕೈಗೊಂಡಿರತಕ್ಕ ರೂರಲ್ ಕಮ್ಯೂನಿಕೇಷ್ಟ್ ರಸ್ತೆಗಳ ಮಟ್ಟ ಯಾವುದು ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಹಾಗೊಂದು ವೇಳೆ ಮಳೆ ಬಂದು ಅಲ್ಲೊಂದು ಇಲ್ಲೊಂದು ರಸ್ತೆ ಕೊಚ್ಚಿಹೋಗಿದ್ದರೆ ಅಂಥಾದ್ದಕ್ಕೆ ದುಡ್ಡನ್ನು ಒದಗಿಸ ಬೇಕಾಗುತ್ತದೆ. ಅದನ್ನು ಮುಂದೆ ವಿಚಾರ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಈ ರಸ್ತೆಗಳಿಗಾಗಿ ಜಿಲ್ಲಾವಾರ್ ಮತ್ತು ತಾಲ್ಲೂಕ್‌ವಾರಾಗಿ ಎಷ್ಟೆಷ್ಟು ಪೊಬಲಗನ್ನು ಹಂಚಲಾಗಿತ್ತು? ಈಗ ಆ ಪೈಕಿ ಎಷ್ಟು ಕೆಲಸವಾಗಿದೆ ಮತ್ತು ಹಣ ಇನ್ನೆಷ್ಟು ಉಳಿದಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಎರಡನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ನಮ್ಮ ರಾಜ್ಯಕ್ಕೆ ಹಣ ಬಂದನಂತರ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ 50 ಮೈಲಿ ಆರ್. ಸಿ. ರಸ್ತೆ ಕೆಲಸ ನಡೆಸ ಬೇಕೆಂದು ಒಂದು ಆಜ್ಞೆಯನ್ನು ಆಗ ಹೊರಡಿಸಿದರು. ಆದರೆ ಆಗ ದೇಶದಲ್ಲಿ ಕೆಲವು ಕಡೆ ಕ್ಷಾಮದ ಪರಿಸ್ಥಿತಿ ಇತ್ತು. ಆಗ ಜನರಿಗೆ ಜೀವನೋಪಾಯ ಕಲ್ಪನತಕ್ಕ ಉದ್ದೇಶದಿಂದ ಕೆಲವು ಭಾಗಗಳಲ್ಲಿ ಹೆಚ್ಚು ಮೈಲಿ ರಸ್ತೆ ಕೆಲಸ ನಡೆಸಲಾಗಿದೆ. ಆದರೆ ಕೆಲವು ಕಡೆ ಕಡಮೆ ಆಗಿದೆ. ಹಾಗೆ ಕಡಮೆ ಬಿದ್ದಿರತಕ್ಕ ತಾಲ್ಲೂಕುಗಳಲ್ಲಿ ಈ 50 ಮೈಲಿ ಲಿಮಿಟ್ಟನ್ನು ಮುಟ್ಟಲು ಏನೇನು ಪ್ರಯತ್ನ ನಡೆಸಬೇಕೋ ಅದನ್ನೆಲ್ಲಾ ನಡೆಸುತ್ತಿದ್ದೇವೆಂದು ನಾನಾಗಲೇ ತಿಳಿಸಿದೆ.

ಶ್ರೀ ಎಸ್. ಶಿವಪ್ಪ.—ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಭಾಗದಲ್ಲೂ ಎತ್ತಿನ ಗಾಡಿಗಳು ತಿರುಗತಕ್ಕ ರಸ್ತೆ ಮಾಡಲು ಎಷ್ಟು ಮೈಲಿ ರಸ್ತೆ ಕೆಲಸ ಆಗ ಬೇಕು ಎಂಬುದನ್ನು ತಿಳಿಸುತ್ತೀರಾ?

Have Government got a plan as to what will be the mileage required to fulfil all the obligations to the villages to provide a cart road? Have they got a physical target of the required mileage of roads?

Sri VEERENDRA PATIL.—As regards the physical target, as I have already said, in the year 1959–60 Government took a decision to have fifty miles of rural communication roads in each taluk; that is the physical target and we are trying to achieve that target.

Sri S. SHIVAPPA.—Is it the policy of Government to construct roads according to the whims and fancies of the Ministers because from the answer provided by the Minister himself in certain taluks they have constructed hundreds of miles of roads whereas they have not constructed even fifty miles in certain taluks? Does that not mean that the policy of the Government is to construct roads according to the whims and fancies of the Ministers?

Sri VEERENDRA PATIL.—The policy of Government is quite obvious and that is to have fifty miles of roads for each taluk. But there was some misunderstanding about the Government order issued in 1959–60 in the mind of the public and also in the mind of the P.W.D. They thought that this is the programme only for 1960–61 and that this is not the programme for the entire five years; whereas according to the Government the fifty mile programme was for the entire five-year period. They thought that there was no limit. This was the confusion created and as a result of

that certain taluks have got more than fifty miles and they have exceeded the 50-mile limit.

Mr. SPEAKER.—Would the Hon'ble Minister kindly consider whether it will be possible for him to get the break up for 350 lakhs district-wise and also the mileage of 10,861 districtwise? Because the next question, No. 69, also deals with this. If the Hon'ble Minister feels that he can get information tomorrow, I will hold over these questions till tomorrow.

Sri VEERENDRA PATIL.—May I submit, Sir, so far as mileage tackled district-wise is concerned, figures are available with me. But the break-up *re* : amount spent I do not have with me now. If they want now what is the mileage tackled in each district, I am in a position to give.

Mr. SPEAKER.—Even with regard to 350 lakhs, it should not be difficult.

Sri VEERENDRA PATIL.—District-wise figures are not with me, Sir. I will furnish the same to-morrow.

Mr. SPEAKER.—Then I take it that the questions 20 and 69 may be held over for tomorrow.

The next question namely, Q. No. 96, also deals more or less with the same subject. Does the Hon'ble Minister feel that it should also be clubbed with held over these questions?

Sri VEERENDRA PATIL.—Yes.

Mr. SPEAKER.—Then that question also will be held over for tomorrow.

Starting of a Fertiliser Factory in South Kanara District.

*Q.—62. Sri A. KRISHNA SHETTY (Mangalore II).—

Will the Government be pleased to state :—

(*a*) whether they have decided to start a Fertiliser Factory in the South Kanara District ;

(*b*) the details of the factory like outlay, capacity, etc., may be furnished ;

(*c*) when will the factory start production ?

A.—Sri K. MALLAPPA (Minister for Industries and Commerce).—

(*a*) Government are not starting a Fertiliser Factory ; but they have recommended the starting of a Fertiliser Factory at Mangalore in South Kanara District, in the private sector.

(*b*) The Government of India have informed the private sponsors, M/s. Shaw Wallace and Co. Ltd., Calcutta, that they are prepared to grant a licence to them subject to certain conditions. The details asked for would be available after the scheme is finalised and the necessary license granted.

(*c*) The period within which the factory would go into production would be known after the license is granted by the Government of India.

ಶ್ರೀ ಎ. ಕೃಷ್ಣಶೆಟ್ಟಿ.—ಈ ಫರ್ಟಿಲೈಜರ್ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಎಷ್ಟು ಹಣ ಖರ್ಚಾಗಬಹುದೆಂದು ಅಂದಾಜಿದೆ ?

†ಶ್ರೀ ಕೆ. ಮಲ್ಲಪ್ಪ.—ಸಾಧಾರಣವಾಗಿ 27 ಕೋಟಿ ರೂಪಾಯಿಗಳ ಅಂದಾಜಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಈ ನಿಯೋಜಿತ ಫ್ಯಾಕ್ಟರಿಯನ್ನು ಎಲ್ಲಿ ತೆಗೆಯುವ ಅಂದಾಜಿದೆ ?

ಶ್ರೀ ಕೆ. ಮಲ್ಲಪ್ಪ.—ಕಮಿಟಿಯವರು ಇದನ್ನು ಮಂಗಳೂರಿನಲ್ಲಿ ಪ್ರಾರಂಭಿಸುವುದಕ್ಕೆ ಶಿಫಾರಸು ಮಾಡಿದ್ದಾರೆ.

Sri ANNA RAO GANAMUKHI.—May I know the assistance promised by the Government for this private party?

Sri K. MALLAPPA.—The matter is still under consideration. We have not yet promised anything because he has not been able to obtain the license. The matter will be considered after the licence is obtained.

Sri B. D. JATTI.—It may not be in the private sector, Sir. If it is in the private sector, is it necessary for the Government to give any financial assistance ?

Sri K. MALLAPPA.—It is in the private sector, Sir.

Sri ANNA RAO GANAMUKHI.—What arrangement has been made to supply the required power for this factory ?

Sri K. MALLAPPA.—Power will be supplied after Sharavathi Project is completed.

Sri GANJI VEERAPPA.—Is there any assistance from the Central Government for this ?